**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : 2014–15ನೇ ಸಾಲಿಗೆ ಬಿಡುಗಡೆ ಮಾಡಿರುವ ಅನುದಾನವನ್ನು ವರ್ಗಾಯಿಸುವ – ಬಗ್ಗೆ
ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/41/ಜೈಅಯೋ/2014 ದಿನಾಂಕ 29.01.2015

*****

ಪ್ರಸ್ತಾವನೆ :

2014–15ನೇ ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಹಾಸನ ಜಿಲ್ಲಾ ಪಂಚಾಯಿತಿಗೆ ಓದಲಾದ ಆದೇಶದಲ್ಲಿ ಜೈವಾನಿಲ ಘಟಕದ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ 2810–60–196–6–01ರಡಿ ರೂ.54,27,500/– ಗಳನ್ನು ಹಾಸನ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ.

ಈ ಪ್ರಯುಕ್ತ 2014–15ನೇ ಸಾಲಿಗೆ ಹಾಸನ ಜಿಲ್ಲೆಗೆ ಸರ್ಕಾರದಿಂದ 650 ಭೌತಿಕ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ. 650 ಭೌತಿಕ ಗುರಿಯಲ್ಲಿ ಕೇವಲ 100 ಭೌತಿಕ ಗುರಿಯನ್ನು ಮಾತ್ರ ಸಾಧನೆಯಾಗಿರುತ್ತದೆ.

ಓದಲಾದ ಆದೇಶದಲ್ಲಿ ಬಿಡುಗಡೆಗೊಳಿಸಿರುವ ಅನುದಾನದ ಪೈಕಿ ರೂ.1,32,000ಗಳನ್ನು (100 ಜೈವಾನಿಲ ಸ್ಥಾವರಗಳಿಗೆ ವಿನಿಯೋಗಿಸತಕ್ಕದ್ದು) ಹೊರತುಪಡಿಸಿ, ಬಾಕಿ ಉಳಿದ ರೂ.41,07,500/– ಗಳನ್ನು ಉಡುಪಿ ಜಿಲ್ಲಾ ಪಂಚಾಯಿತಿಗೆ ವರ್ಗಾವಣೆ ಮಾಡಲು ಸರ್ಕಾರವು ತೀರ್ಮಾನಿಸಿದೆ ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/41/ಜೈಅಯೋ/2014 ಬೆಂಗಳೂರು, ದಿನಾಂಕ 03.06.2015**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ಹಾಸನ ಜಿಲ್ಲಾ ಪಂಚಾಯಿತಿಯು ರೂ.41,07,500/– ಗಳನ್ನು ಡಿ.ಡಿ./ಚೆಕ್ ಮೂಲಕ ಉಡುಪಿ ಜಿಲ್ಲಾ ಪಂಚಾಯಿತಿಗೆ ಈ ಕೂಡಲೇ ವರ್ಗಾವಣೆ ಮಾಡಲು ಸರ್ಕಾರವು ಆದೇಶಿಸಿದೆ.

ಉಡುಪಿ ಜಿಲ್ಲಾ ಪಂಚಾಯಿತಿಯವರು ಲೆಕ್ಕ ಶೀರ್ಷಿಕೆ 2810–60–196–6–01ರಡಿ ರೂ.41,07,500/– ಗಳನ್ನು 2014–15ನೇ ಸಾಲಿನಲ್ಲಿ ಸಾಧಿಸಿರುವ 500 ಭೌತಿಕ ಗುರಿಗೆ ವಿನಿಯೋಗಿಸಿಕೊಳ್ಳತಕ್ಕದ್ದು.

ಸದರಿ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ವಿನಿಯೋಗಿಸತಕ್ಕದ್ದು. ಸದರಿ ಅನುದಾನವನ್ನು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ–2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ಜಿಲ್ಲೆ
2. ಉಪಕಾರ್ಯದರ್ಶಿ (ಅಭಿವೃದ್ಧಿ)/ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ಜಿಲ್ಲೆ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ
4. ಉಪಕಾರ್ಯದರ್ಶಿ (ಅಭಿವೃದ್ಧಿ)/ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಉಡುಪಿಜಿಲ್ಲೆ
5. ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.